## ಇಲ್ಲಿಯವರೆಗೆ



ಡಿಜಿಟಲ್ ಸ್ಕ್ರೀನ್ ಮೇಲೆ ಮೂಡಿದ ವಿವಿಧ ವಿಭಾಗಗಳ ಮೇಲೆ ಹನ್ನಾ ಕಣ್ಣೋಡಿಸುತ್ತಾಳೆ. ಸಂಶೋಧನೆ ಹಾಗೂ ತಯಾರಿಕೆಯ ವಿಭಾಗಗಳು ಆ ವಿಶಾಲ ಆವರಣದೊಳಗೆ ಸ್ಥಾಪಿತವಾಗಿವೆ ಎಂದು ತಿಳಿದಿದ್ದರೂ ಎಲ್ಲೂ ಅದರ ಹೆಸರು ಪ್ರತಿಫಲಿತವಾಗದಿದ್ದರಿಂದ ಈ ಕೇಂದ್ರ ಕೇವಲ ರೊಬೋ ದುರಸ್ತಿಗೆ ಮೀಸಲಾಗಿರಬೇಕೆಂದು ಭಾವಿಸುತ್ತಾಳೆ. ಅವಳನ್ನು ನೋಡುತ್ತಿದ್ದಂತೆ ಅವಿರತ್ ಸ್ವಾಗತಕಾರಿಣಿ ಕೊಠಡಿಯೊಳಗೆ ಕಾಲಿರಿಸುತ್ತಾನೆ. ಅಲ್ಲಿ ಹನ್ನಾಳನ್ನು ನೋಡಿದ ಕೂಡಲೇ ಕೈಬೀಸಿ ರೊಬೋ ಸ್ವಾಗತಕಾರಿಣಿಗೆ ತಾನು ಬಂದ ಉದ್ದೇಶ ಹಾಗೂ ತನ್ನ ವಿವರಗಳ ಬಗ್ಗೆ ಮಾಹಿತಿ ನೀಡಿದ್ದ. ಅಲ್ಲಿಂದ ಗಾಜಿನ ಮಾರ್ಗವಿಥಿಯಲ್ಲಿ ಸಾಗುವ ಸಲುವಾಗಿ ಅವಿರತ್ ಹನ್ನಾಳನ್ನು ಕಣ್ಸನ್ನೆಯಿಂದಲೇ ಕರೆಯುತ್ತಾನೆ. ಇಬ್ಬರೂ ಮಾರ್ಗವಿಥಿಯಲ್ಲಿ ಹೋಗುವಾಗ ಬಿಳಿಯ ಪಾರಿವಾಳವೊಂದು ಇವರಿಬ್ಬರಿಗೆ ದಾರಿ ತೋರಿಸುತ್ತದೆ. ಕೆಲ ಹೊತ್ತಿಗೇ ಅವಿರತ್‌ನ ಗೆಳೆಯ ಶೈನಿ ಇದ್ದ ವರ್ಕ್ ಸ್ಟೇಷನ್ ಎದುರಾಗುತ್ತದೆ. ಆದರೆ ಅದರ ಹೊರಗೆ ಹಾಕಲಾದ ಪ್ರತಿಫಲನಾ ಫಲಕದಲ್ಲಿ 'ರೊಬೋ ಕ್ಲಿನಿಕ್' ಎಂದು ನಮೂದಾಗಿದ್ದನ್ನು ಕಂಡು ಹನ್ನಾ ಚಕಿತಳಾಗುತ್ತಾಳೆ. ಅವರು ದ್ವಾರದ ಬಳಿ ಬರುತ್ತಿದ್ದಂತೆಯೇ ಪಾರಿವಾಳವು ತನ್ನ ನೆಲೆ ಕಂಡುಕೊಂಡಂತೆ ಗೋಡೆಗೆ ಆತುಕೊಂಡ ಒಂದು ಸ್ಟ್ಯಾಂಡ್ ಮೇಲೆ ವಿರಮಿಸುತ್ತದೆ. ಈ ಮಧ್ಯೆ ಹಿಂದೆ ಪಾದಯಾತ್ರೆ ನಡೆಸಿದ್ದ ಅರೆಮಾನವರ ಪಡೆ ಮರಳಿ ಬರುತ್ತದೆ. ಅರೆಮಾನವರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗಮನಿಸಿದ ಹನ್ನಾ ಸಮಾಧಾನದಿಂದ ಹಿಂದಿರುಗುವಾಗ ಯಾವುದೋ ವಸ್ತು ಅವಳ ಕೈಗೆ ತಾಗಿ ರಕ್ತ ಬರುತ್ತದೆ. ನೋವಿನಿಂದ ಸಣ್ಣಗೆ ಚೀರುತ್ತಾಳೆ ಹನ್ನಾ.

ರೊಬೋಗಳಿಗೆ ಕ್ಲಚ್‌ಗಳನ್ನು ನೀಡುತ್ತಿದ್ದೀರಿ. ಭಲೇ!' ಸವ್ಯಸಾಚಿ ಅವರ ಮಾತಿನಲ್ಲಿದ್ದ ವ್ಯಂಗ್ಯವನ್ನು ಗುರುತಿಸಿ ಶೈನಿ ಸಮಜಾಯಿಷಿ ನೀಡಲು ಮುಂದಾದಾಗ, ಅವರು ಮಾತು ಬೇಡ ಎನ್ನುವಂತೆ ಕೈ ಸನ್ನೆಯ ಮೂಲಕ ಸೂಚಿಸಿದ್ದರು.

ತಮ್ಮ ವೀಕ್ಷಣೆ ಮುಗಿದು ಹೊರಡುವಾಗ ಶೈನಿಗೆ 'ಆದಷ್ಟು ಬೇಗ ದುರಸ್ತಿ ಮಾಡಿ, ಹಾಗೆಯೇ ದುರಸ್ತಿಗೆ ತಗಲುವ ವೆಚ್ಚವನ್ನು ಆದಷ್ಟು ಬೇಗ ಕಳುಹಿಸಿ ಕೊಡಿ' ಎನ್ನಲು ಮರೆಯಲಿಲ್ಲ. ತಾವು ಕೆಲವೇ ದಿನಗಳಲ್ಲಿ ನಡೆಸುವ ಅಧಿಕಾರಿಗಳ ಸಭೆಯ ಹಲವಾರು ಕಾರ್ಯಸೂಚಿಗಳಲ್ಲಿ ಈ ವಿಷಯವನ್ನೂ ಅಳವಡಿಸಿ ಚರ್ಚೆಗೆ ಅವಕಾಶ ಕಲ್ಪಿಸಲು ನಿರ್ಧರಿಸಿದ್ದರು.

ಅವರನ್ನು ಬೀಳ್ಕೊಟ್ಟು ಹನ್ನಾ ತನ್ನ ಮನೆಯ ಹಾದಿ ಹಿಡಿದು ಹೊರಟಾಗ ಅವಳಿಗೆ ಅವಿರತ್ ತಾನು ಬರುತ್ತಿರುವ ಸಂದೇಶ ಕಳುಹಿಸಿದ್ದ. ಅವನು ಮನೆಗೆ ಬರುವ ವಿಚಾರ ಅವಳಿಗೆ ಹಿತವೆನಿಸಿತ್ತಾದರೂ ಅವನು ತನ್ನ ಕೆಲಸದ ಮಧ್ಯೆ ಕೆಲವೊಮ್ಮೆ ತನ್ನನ್ನು ಕಡೆಗಣಿಸುತ್ತಿರುವನೇನೋ ಎಂಬ ಕೊರಗು ಕಾಡುತ್ತಿತ್ತು.

ಅವರು ಬರುತ್ತಿರುವ ಹಾದಿಯೂ ಎಂ.ಪಿ. ವಾಕಿಯಲ್ಲಿ ಮೂಡಿ ಬಂದು ಅಲಕಾದೇವಿಗೆ ಹೇಳಿದಳು. 'ಮಾಮ್, ಅವಿರತ್ ಇನ್ನೇನು ಕೆಲವೇ ನಿಮಿಷಗಳಲ್ಲಿ ಬರಬಹುದು. ಈ ಸಂಜೆ ನಿನ್ನ ಅಡುಗೆ ರುಚಿಯ ಸೊಗಸನ್ನು ಅವರಿಗೆ ಉಣಿಸಿಬಿಡು.' ಅದಕ್ಕೆ ಅಲಕಾದೇವಿ ಕಿರುನಗೆ ಬೀರಿ ಡೈನಿಂಗ್ ಟೇಬಲ್ ಸಜ್ಜುಗೊಳಿಸಲು ಅಣಿಯಾದಳು.

ಸಾಧಾರಣವಾಗಿ ಹನ್ನಾ ಮನೆಗೆ ಯಾರನ್ನೂ ಆಹ್ವಾನಿಸುತ್ತಿರಲಿಲ್ಲವಾದ್ದರಿಂದ ಅಂದು ಅತಿಥಿಯೊಬ್ಬರ ಆಗಮನ ಮನೆಯಲ್ಲಿ ಸಂಭ್ರಮವನ್ನು ಮೂಡಿಸಿತ್ತು.

'ಗುಡ್ ಡೇ ಹನ್ಸ್. ನಿನ್ನೆ ನಿನ್ನನ್ನು ನಡುವೆ ಬಿಟ್ಟು ಹೊರಟಿದ್ದಕ್ಕೆ ಕ್ಷಮೆ ಇರಲಿ' ಎಂಬುದು ಅವಿರತ್‌ನ ಮೊದಲ ಮಾತಾಗಿತ್ತು.

'ಪರವಾಗಿಲ್ಲ. ಕರ್ತವ್ಯ ಕರೆದರೆ ಓಗೊಡಲೇ ಬೇಕಲ್ಲವೇ? ನಾವಿಬ್ಬರೂ ಒಂದೇ ದೋಣಿಯ ಪಯಣಿಗರು' ಎನ್ನುತ್ತಾ ಹನ್ನಾ ಅವನನ್ನು ಒಳ ಆಹ್ವಾನಿಸಿದಳು.

ಅವಿರತ್ ಹಲವಾರು ತನಿಖಾ ಪ್ರಕರಣಗಳ ಮಧ್ಯೆ ಬಿಡುವು ಮಾಡಿಕೊಂಡು ಒಂದಿಷ್ಟು ಸಮಯ ತನಗೆ ಹಿತವೆನಿಸಿದವರಲ್ಲಿ ಕಳೆಯಲು ತೀರ್ಮಾನಿಸಿದ್ದ. ಹನ್ನಾಳ ಲವಲವಿಕೆಯ ಓಡಾಟ ನೋಡಿ ಸಮಾಧಾನದ ಉಸಿರುಬಿಟ್ಟಿದ್ದ.

'ನಿನಗೇನೂ ಆಗಿಲ್ಲದಿರುವುದು ನಿನ್ನ ಅದೃಷ್ಟವೆನ್ನಬೇಕು. ಆ ಪಡೆ ಯಾವ ಹಂತಕ್ಕೆ ಹೋಯಿತೆಂಬುದರ ನೈಜ ದೃಶ್ಯಗಳ ಪ್ರಸಾರ ನೋಡಿಯೇ ಅಂದುಕೊಂಡೆ. ಆದರೆ ಆ ಸನ್ನಿವೇಶವನ್ನು ನೀವು ನಿಭಾಯಿಸಿದ ರೀತಿ ಮೆಚ್ಚುವಂತಹದ್ದು. ದಂಧೆಕೋರರ ವಿರುದ್ಧ ರೊಬೋಗಳಿಂದ ಆಕ್ರಮಣಕಾರಿ ನಡೆಯನ್ನು ನಾವು ಅಪೇಕ್ಷಿಸುತ್ತೇವಾದರೂ ಅರೆಮಾನವ ಪಡೆಯ ಆಕ್ರೋಶ ರೊಬೋಗಳ ಮೇಲೆ ತಿರುಗಿದಾಗ ಆ ಬೆಂಕಿಗೆ ತುಪ್ಪ ಎರಚಿದಂತೆಯೇನಾದರೂ ಈ ರೊಬೋಗಳು ನಡೆದುಕೊಂಡಿದ್ದೇ ಆಗಿದ್ದಲ್ಲಿ ಪರಿಸ್ಥಿತಿಯ ಲಾಭ ಬಹುಶಃ ಅರೆಮಾನವ ಪಡೆ ಪಡೆಯುತ್ತಿತ್ತೇನೋ. ರೊಬೋಗಳು ಸ್ವರಕ್ಷಣೆಗೆ ಮುಂದಾದಾಗಲೂ ಪಡೆಯ ಸದಸ್ಯರನ್ನು ಹೊರದಬ್ಬುವಲ್ಲಿ ಯಶಸ್ವಿಯಂತೂ ಆದರು.'

'ನನಗೆ ಆ ಸನ್ನಿವೇಶಗಳನ್ನು ಮತ್ತೆ ನೆನಪಿಸಿಕೊಳ್ಳಲು ಇಷ್ಟವಿಲ್ಲ ಅವಿ. ಲೆಟ್ ಅಸ್ ಟಾಕ್ ಸಮ್‌ಥಿಂಗ್ ಎಲ್ಸ್...' ಎಂದು ಹನ್ನಾ ನಿರಾಸಕ್ತಿಯಿಂದ ಅಲಕಾದೇವಿ ಕಡೆ ತಿರುಗಿ ಸನ್ನೆ ಮಾಡಿದಳು. ಅವಳ ಕೈ ಸನ್ನೆಯನ್ನು ಅರ್ಥ ಮಾಡಿಕೊಂಡ ಅಲಕಾದೇವಿ ಒಳಹೋಗಿ ಅವಿರತ್‌ನಿಗೆ ವಿಶೇಷ ತಿನಿಸನ್ನು ತಂದಿದ್ದರು. ಅವರ ಪರಿಚಯವನ್ನು ಮಾಡುತ್ತಾ ಹನ್ನಾ ಕೆಲಕಾಲ ತನ್ನನ್ನೇ ಮರೆತಂತಾಗಿದ್ದಳು.

'ನನ್ನ ಮಾಮ್ ಅಲಕಾದೇವಿ. ನನ್ನ ಹೊಟ್ಟೆಯ ಹಸಿವನ್ನು ತಣಿಸುವ ಮಾತೆ. ನನ್ನ ಮನೆಯ ಶುಚಿತ್ವದ ಜವಾಬ್ದಾರಿಯನ್ನು ನಿಭಾಯಿಸುತ್ತಿರುವರಲ್ಲದೆ ನನ್ನ ಏಕಾಂಗಿತನವನ್ನು ಹೋಗಲಾಡಿಸುವ ಸಂಗಾತಿ' ಎಂದು ಭಾವುಕಳಾಗಿ ಪರಿಚಯ ಮಾಡಿದಾಗ ಅವಿರತ್ ದಂಗಾಗಿದ್ದ.

'ಮೈಗಾಡ್. ನೀನು ಮಾಮ್ ಎಂದು ಕರೆಯುತ್ತಿರುವುದು ಒಂದು ರೋಬೋ ಮಾಮ್ ಅಲ್ಲವಷ್ಟೇ?' ಸಂದೇಹ ಪರಿಹರಿಸಿಕೊಳ್ಳುವುದು ಅವಶ್ಯಕವಿತ್ತು.

'ನಿಮ್ಮ ಊಹೆ ನಿಜ ಅವಿ. ಇವರು ನನ್ನ ರೋಬೋ ಮಾಮ್' ಎಂದು ಅಭಿಮಾನದಿಂದ ಅಲಕಾದೇವಿಯ ಕೈಯನ್ನು ಹಿಡಿದು ಅಮುಕಿದಳು.

ಅಲಕಾದೇವಿಗೆ ಅದು ಪ್ರೀತಿಯ ಸ್ಪರ್ಶದಂತೆ ತೋರಿ ಹನ್ನಾಳ ತಲೆಯನ್ನು ನೇವರಿಸಿ ಅವಿರತ್‌ನನ್ನು ಕೇಳಿದಳು,
'ಮಿ. ಅವಿರತ್. ನಿಮಗೆ ನಾನು ಮಾಡಿದ ತಿನಿಸು ಇಷ್ಟವಾಯಿತೇ?'

'ಮಾಮ್. ಬಹಳ ರುಚಿಕರವಾಗಿದೆ. ಹನ್ನಾ ಕಳೆಕಳೆಯಾಗಿರಲು ಕಾರಣ ನಿಮ್ಮ ಕೈಯ ಅಡುಗೆ ಎಂಬುದು ಗೊತ್ತಾಗುತ್ತದೆ' ಎಂದಾಗ ಹನ್ನಾ ಮುಖ ಗಂಟಿಕ್ಕಿಕೊಂಡಿದ್ದಳು.

'ನಾನು ನನ್ನ ತಂದೆ–ತಾಯಿಯ ಜೀನ್ಸ್‌ನ್ನು ಅಂತರ್ಜಾತವಾಗಿ